**ಕರ್ನಾಟಕ ಸರಕಾರ**

ಸಂ:ಬಿಜಿಎಂ:ಡಿಯುಡಿಸಿ:ಯುಪಿಎಸಿ:ಸಿಆರ್:1:2012–13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ನಗರ ಬಡತನ ನಿರ್ಮೂಲನಾ ಕೋಶ,
ಬೆಳಗಾವಿ, ದಿನಾಂಕ:31.05.2012.

**ವಿಷಯ:** ಪುರಸಭೆ ಬೈಲಹೊಂಗಲ ವ್ಯಾಪ್ತಿಯಲ್ಲಿ 2012–13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25 ಮತ್ತು ಶೇ.3ರಡಿ ತೆಗೆದುಕೊಂಡ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಕುರಿತು.

**ಓದಿತು:**–1)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011 ದಿನಾಂಕ:27.02.2012

2)ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಸುತ್ತೋಲೆಸಂ:ಪೌನಿ:22.75:ಸುತ್ತೋಲೆ:2:2012–13 ದಿನಾಂಕ:24.04.2012

3)ಮುಖ್ಯಾಧಿಕಾರಿ, ಪುರಸಭೆ ಬೈಲಹೊಂಗಲ ಇವರ ಪತ್ರ ಸಂಖ್ಯೆ: ಪುಸಬೈ:ಪುರಸಭೆ ನಿಧಿ:7.25% 3%:ಕ್ರಿಯೋ:170:2012–13 ದಿನಾಂಕ:30.04.2012.

**ಪ್ರಸ್ತಾವನೆ:**

2012–13ನೇ ಸಾಲಿಗೆ ಬೈಲಹೊಂಗಲ ಪುರಸಭೆಯು ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಗಳನ್ವಯ ಬಾಬ್ತುಗಳನ್ನು ಹೊರತುಪಡಿಸಿ ರೂ.39,86,000/–ಗಳ ಆದಾಯವನ್ನು ಹೊಂದಿರುತ್ತದೆ. ಅದರಂತೆ ಓದಿತು (3)ರನ್ವಯ ಮುಖ್ಯಾಧಿಕಾರಿ, ಪುರಸಭೆ ಬೈಲಹೊಂಗಲ ಇವರು ಪುರಸಭೆ ಆದಾಯದಲ್ಲಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ರೂ.2,88,985/–ಗಳಲ್ಲಿ 01 ಕಾರ್ಯಕ್ರಮಕ್ಕೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ. 1,19,580/–ಗಳಲ್ಲಿ 01 ಕಾರ್ಯಕ್ರಮಕ್ಕೆ ಕ್ರಿಯಾ ಯೋಜನೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅದರಂತೆ ಓದಿತು (1)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿಯಂತೆ ಪರಿಶೀಲಿಸಲಾಗಿ, ಶೇ.7.25ರಷ್ಟು ನಗರದ ಇತರೆ ಬಡಜನರ ಕಲ್ಯಾಣ ನಿಧಿಗೆ ರೂ. 2,88,985/–ಗಳಲ್ಲಿ 01 ಕಾರ್ಯಕ್ರಮಕ್ಕೆ ಹಾಗೂ ಶೇ.3ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ. 1,19,580/–ಗಳಲ್ಲಿ 01 ಕಾರ್ಯಕ್ರಮವನ್ನು ಕ್ರಿಯಾ ಯೋಜನೆ ಅನುಮೋದನೆಗೆ ಪ್ರಸ್ತಾಪಿಸಿದ್ದನ್ನು ಪರಿಗಣಿಸಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ಹೆಸರು | ಅಂದಾಜು ಮೊತ್ತ (ರೂ. ಗಳಲ್ಲಿ) |
|---|---|---|
| *1* | *2* | *3* |
| | **ಶೇ.7.25ರ ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು** | |
| 1 | ಇತರೆ ಬಡಜನಾಂಗದ ಫಲಾನುಭವಿಗಳಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ಸಹಾಯಧನ ನೀಡುವುದು. | 2,88,985.00 |
| | **ಒಟ್ಟು** | **2,88,985.00** |

| | | |
|---|---|---|
| | **ಶೇ.3ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು** | |
| 1 | ವಿಕಲಚೇತನ ಫಲಾನುಭವಿಗಳಿಗೆ ಸ್ವಯಂ ಉದ್ಯೋಗ ಹೊಂದಲು ಬ್ಯಾಂಕ ಸಾಲಕ್ಕೆ ಸಹಾಯಧನ ನೀಡುವುದು. | 1,19,580.00 |
| | **ಒಟ್ಟು** | **1,19,580.00** |

**ಆದೇಶ**

ಮೇಲಿನ ಪ್ರಸ್ತಾವನೆಯಂತೆ ಪುರಸಭೆ ಬೈಲಹೊಂಗಲ ವ್ಯಾಪ್ತಿಯಲ್ಲಿ 2012-13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಯೋಜನೆಯಡಿ ರೂ.2,88,985/-ಗಳಲ್ಲಿ 01 ಕಾರ್ಯಕ್ರಮ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಯೋಜನೆಯಡಿ ರೂ. 1,19,580/-ಗಳಲ್ಲಿ 01 ಕಾರ್ಯಕ್ರಮವನ್ನು ಕೈಕೊಳ್ಳಲು ಕ್ರಿಯಾಯೋಜನೆ ಅನುಮೋದನೆ ನೀಡಿ ಓದಿತು (1) ಹಾಗೂ (2)ರ ಸರ್ಕಾರದ ಸುತ್ತೋಲೆಯ ನಿಬಂಧನೆ ಹಾಗೂ ಷರತ್ತುಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

**ಸಹಿ/-**
**(ವಿ. ಅನ್ಬುಕುಮಾರ)**
ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿ:**ಗೌರವಾದರಗಳೊಂದಿಗೆ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಾದರಪಡಿಸಿದೆ.
**ಪ್ರತಿ:**ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.
**ಪ್ರತಿ:**ಮುಖ್ಯಾಧಿಕಾರಿಗಳು, ಪುರಸಭೆ ಬೈಲಹೊಂಗಲ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/-**

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ